ಸತ್ಯಂವದ ಧರ್ಮಂಚರ
Sathyamvada Dharmamchara

ನಹಿಜ್ಞಾನೇನ ಸದೃಶಂ
Nahignanena Sadrusham

ವಿದ್ಯಾಗುರೂಣಾಂ ಗುರುಃ
Vidyagurunam Guru



ಶ್ರೀ ಗುರುಜ್ಞಾನಕೇಂದ್ರ ಟ್ರಸ್ಟ್ (ರಿ.) Sri Gurugnanakendra Trust ®

# ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠ

# Vishwa Vokkaligara Mahasamsthana Mutt

18ನೇ ಕಿಲೋಮೀಟರ್, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560 060
#18th Kilometer, Mysore Road, Kengeri, Bangalore - 560 060



ಪರಮ ಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳು
Paramapoojya Jagadguru
Sri Sri Sri Kumarachandrashekaranatha Swamiji

Mobile : 9008831365

ಶ್ರೀ ಗಣೇಶಾಯ ನಮಃ
Sri Ganeshaya Namaha

ಕ್ರ.ಸಂ :
Sl.No. :

ದಿನಾಂಕ : 02-12-2024
Date :

**ರವರಿಗೆ**
ಆರಕ್ಷಕ ಉಪನಿರೀಕ್ಷಕರು
ಉಪ್ಪಾರಪೇಟೆ ಪೋಲೀಸ್ ಠಾಣೆ
ಬೆಂಗಳೂರು ನಗರ.

ಮಾನ್ಯರೇ,

ವಿಷಯ : ದಿನಾಂಕ:02–12–2024 ರಂದು ತಮ್ಮ ಠಾಣೆಯಲ್ಲಿ ವಿಚಾರಣೆಗೆ ಹಾಜರಾಗುವುದರ ಕುರಿತು.

ಉಲ್ಲೇಖ : ತಮ್ಮ ಕಛೇರಿ ನೋಟೀಸ್ ದಿನಾಂಕ:29–11–2024

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳಾದ ನಾವು ತಮಗೆ ತಿಳಿಸಬಯಸುವುದೇನೆಂದರೆ, ಉಲ್ಲೇಖ ಪತ್ರದಂತೆ ತಾವು ದಿನಾಂಕ:29–11–2024 ರಂದು ಕಲಂ 35(3) ಬಿ.ಎನ್.ಎಸ್–2003 ರ ಅಡಿ ನಮಗೆ ನೋಟೀಸ್ ನೀಡಿ ಬೆಳಿಗ್ಗೆ 11 ಗಂಟೆಗೆ ತನಿಖಾಧಿಕಾರಿಯ ಮುಂದೆ ವಿಚಾರಣೆಗೆ ಹಾಜರಾಗಲು ಸೂಚಿಸಿರುತ್ತೀರಿ. ಆದರೆ ನಾನೊಬ್ಬ 81 ವರ್ಷದ ವಯೋವೃದ್ಧನಾಗಿದ್ದು, ಮಾರಕ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುತ್ತೇನೆ. ನಮ್ಮ ವೈದ್ಯರು ಸುಮಾರು 10 ದಿನಗಳ ಕಾಲ ವಿಶ್ರಾಂತಿಯಲ್ಲಿ ಇರಲು ಸೂಚಿಸಿರುತ್ತಾರೆ. ಆದ್ದರಿಂದ ತಾವು ತಿಳಿಸಿರುವಂತೆ ದಿನಾಂಕ:02–12–2024 ರಂದು ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ನಾವು ಗುಣಮುಖರಾದಲ್ಲಿ ದಿನಾಂಕ:18–12–2024 ರಂದು ಮಧ್ಯಾಹ್ನ ಸುಮಾರು 3 ಗಂಟೆ ವೇಳೆಗೆ ವಿಚಾರಣೆಗೆ ಹಾಜರಾಗುತ್ತೇವೆ. ಒಂದುವೇಳೆ ನಾವು ವಿಚಾರಣೆಗೆ ಬರಲು ಸಾಧ್ಯವಾಗುತ್ತಿಲ್ಲವಾದ್ದರಿಂದ ನಿಮಗೆ ಏನಾದರೂ ಅನಾನುಕೂಲವಾದಲ್ಲಿ ತಮ್ಮ ತನಿಖಾಧಿಕಾರಿಗಳೇ ನಮ್ಮ ಮಠಕ್ಕೆ ಬಂದು ನಮ್ಮ ಹೇಳಿಕೆಯನ್ನು ಪಡೆದುಕೊಳ್ಳುವುದರಲ್ಲಿ ನಮಗೆ ಯಾವುದೇ ಅಭ್ಯಂತರವಿರುವುದಿಲ್ಲ. ಮುಂದುವರೆದು,

ಈಗಾಗಲೇ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಯಿತಪ್ಪಿನಿಂದಾಗಿ ನಾವು ನೀಡಿದ್ದ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದು, ಸ್ಪಷ್ಟೀಕರಣ ನೀಡಿರುವುದು ಎಲ್ಲಾ ಪತ್ರಿಕಾ ಮಾಧ್ಯಮ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಆದ್ದರಿಂದ ಸಮಾಜದ ಸ್ವಾಸ್ತ್ಯ ಹಾಗೂ ಶಾಂತಿಯ ದೃಷ್ಟಿಯಿಂದ ಈ ಪ್ರಕರಣವನ್ನು ಬೆಳೆಸದೇ ಇಲ್ಲಿಗೆ ಮುಕ್ತಾಯಗೊಳಿಸಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇವೆ. ನಮ್ಮ ವಯಸ್ಸು ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಪೂರಕ ದಾಖಲಾತಿಗಳನ್ನು ಈ ಮನವಿ ಪತ್ರದೊಂದಿಗೆ ಲಗತ್ತಿಸಿರುತ್ತೇವೆ.

ಸ್ಥಳ : ಕೆಂಗೇರಿ
ದಿನಾಂಕ: 02-12-2024

ಇಂತಿ ಭಗವತ್ ಸೇವೆಯಲ್ಲಿ,

ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳು
ಪೀಠಾಧ್ಯಕ್ಷರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ
ಕೆಂಗೇರಿ, ಬೆಂಗಳೂರು-560060